ಭರತನಾಟ್ಯ ಗುರು ಯಾಮಿನಿ ಕೃಷ್ಣಮೂರ್ತಿ ಅವರ ಶಿಷ್ಯೆಯಾಗಿ ತಮ್ಮ ಕಲಾಪಯಣವನ್ನು ಆರಂಭಿಸಿದ ರಮಾ ವೈದ್ಯನಾಥನ್, ಇಂದು ಜಗತ್ತಿನ ಪ್ರಸಿದ್ಧ ನೃತ್ಯಕಲಾವಿದೆ. ತಮ್ಮ ಸಾಧನೆಯನ್ನು ನೃತ್ಯಪ್ರಸ್ತುತಿಗಳಿಗೆ ಸೀಮಿತಗೊಳಿಸದೇ, ಅಧ್ಯಯನ, ಕೊರಿಯೊಗ್ರಫಿ, ಬರವಣಿಗೆ ಮುಂತಾಗಿ ಕಲಾಕ್ಷೇತ್ರದಲ್ಲಿರುವ ಜ್ಞಾನಭಂಡಾರವನ್ನು ಅರಿಯಲು ಹೊರಟಿರುವ ಸಾಧಕಿ. ವಿದ್ವಾನ್ ರಾಮಮೂರ್ತಿ ಮತ್ತು ವಿದ್ವಾನ್ ಮಹಾಲಿಂಗಮ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಿತರು. ಗುರು ಸರೋಜಾ ವೈದ್ಯನಾಥನ್ ಅವರ ಬಳಿ ನೃತ್ಯ ಕಲಿಕೆ ಮುಂದುವರೆಸಿದ ಅವರು, ಮದುವೆಯ ಬಳಿಕ ಗುರುಗಳ ಮನೆಯ ಸೊಸೆಯಾದರು. ನಾಲ್ಕು ದಶಕಗಳಿಂದ ಕಲಾಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಅವರಿಗೆ ಇಬ್ಬರು ಮಕ್ಕಳು. ಮಗಳು ದಕ್ಷಿಣಾ ವೈದ್ಯನಾಥನ್ ಅಮ್ಮನಿಗೆ ಸರಿಸಾಟಿಯೆನಿಸುವ ನೃತ್ಯಕಲಾವಿದೆ. ಮತ್ತೋರ್ವ ಮಗಳು ಸನ್ನಿಧಿ ವೈದ್ಯನಾಥನ್ ಮೃದಂಗ ಕಲಾವಿದೆ. ತಾಳಬದ್ಧವಾದ ಹೆಜ್ಜೆಗಾರಿಕೆ, ಭಾವತೀವ್ರವಾದ ಅಭಿನಯ ಚಾತುರ್ಯ, ಲಾಲಿತ್ಯಪೂರ್ಣ ನೃತ್ಯ ಪ್ರಸ್ತುತಿಯೊಂದಿಗೆ ರಮಾ ಅವರಿಗೆ ಅಪಾರ ಕಲ್ಪನಾಶಕ್ತಿ ಒಲಿದು ಬಂದಿದೆ. ಹೊಸ ಕಥನಗಳನ್ನು ಕೈಗೆತ್ತಿಕೊಂಡು ಕೊರಿಯೊಗ್ರಫಿ ಮಾಡುವ ಮೂಲಕ ಭರತನಾಟ್ಯ ಕ್ಷೇತ್ರಕ್ಕೆ ತಮ್ಮದೇ ಆದ ವಿಶೇಷ ಕೊಡುಗೆ ನೀಡುತ್ತಿದ್ದಾರೆ. ಪ್ರಸ್ತುತ ದೆಹಲಿಯ 'ಗಣೇಶ ನಾಟ್ಯಾಲಯ'ದ ನಿರ್ದೇಶಕರಾಗಿ, ಜಗತ್ತಿನ ವಿವಿಧ ದೇಶಗಳಲ್ಲಿ ನೃತ್ಯ ಪ್ರಸ್ತುತಿ ನೀಡುತ್ತ, ಅಪಾರ ಶಿಷ್ಯಸಮೂಹಕ್ಕೆ ಮಾರ್ಗದರ್ಶನ ಮಾಡುತ್ತ, ತಮ್ಮದೇ ಆದ ಸಾಧನೆಯ ಪಥವನ್ನು ಕಂಡುಕೊಂಡಿದ್ದಾರೆ. ತಮಿಳುನಾಡು ಸರ್ಕಾರವು 'ಕಲೈಮಾಮಣಿ' ಬಿರುದನ್ನು, ಕೇರಳ ಸರ್ಕಾರ 'ಕಲಾಶ್ರೀ' ಎಂಬ ಬಿರುದನ್ನು, ಮಧ್ಯಪ್ರದೇಶ ಸರ್ಕಾರವು 'ಕುಮಾರ ಗಂಧರ್ವ ಪುರಸ್ಕಾರ'ವನ್ನು ನೀಡಿ ಗೌರವಿಸಿದೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯೂ ಅವರಿಗೆ ಸಂದಿದೆ. ಈ ಅನುಪಮ ನೃತ್ಯ ಕಲಾವಿದೆಯೊಂದಿಗೆ 'ಮಯೂರ'ಕ್ಕಾಗಿ ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.

◆ **ಕಲಾ ಸಾಧನೆಯೆಂದರೆ ಒಂದು ರೀತಿ ಹುಚ್ಚುಹಿಡಿದಂತೆ ಕಲಾಪ್ರಕಾರದ ಹಿಂದೆ ಬೀಳಬೇಕು ಎಂದು ನೀವೊಮ್ಮೆ ಹೇಳಿದ್ದಿರಿ. ನೀವು ಭರತನಾಟ್ಯವನ್ನು ಭೇಟಿಯಾದುದು ಎಂದು? ಅದುವೇ ನಿಮ್ಮ ಜೀವನಧರ್ಮ ಎಂದು ಸ್ವೀಕರಿಸಿದ ಕ್ಷಣ, ಕಾರಣಗಳನ್ನು ನೆನಪಿಸಿಕೊಳ್ಳುವಿರಾ?**

ನನ್ನ ಅಮ್ಮ ಮಾಧವಿ ಅವರು ಪುರಾಣ, ಭಾಗವತ ಮುಂತಾದ ಧಾರ್ಮಿಕ ಗ್ರಂಥಗಳ ಕುರಿತು ಪ್ರವಚನ ನೀಡುತ್ತಿದ್ದರು. ನನ್ನನ್ನು ಬಾಲ್ಯದಲ್ಲಿಯೇ ಗುರು ಯಾಮಿನಿ ಕೃಷ್ಣಮೂರ್ತಿ ಅವರ ಬಳಿ ನೃತ್ಯ ತರಗತಿಗೆ ಸೇರಿಸಿದರು. ಎಲ್ಲರಂತೆಯೇ ಬಹಳ ಖುಷಿಯಿಂದ ನೃತ್ಯ ಕಲಿಯತೊಡಗಿದೆ. ಹತ್ತನೇ ವರ್ಷಕ್ಕೇ ರಂಗಪ್ರವೇಶ ಮಾಡುವ ಯೋಗವೂ ಒದಗಿಬಂತು. ಹೀಗೆ ಔಪಚಾರಿಕ ಶಿಕ್ಷಣ ಮತ್ತು ನೃತ್ಯವು ಒಟ್ಟೊಟ್ಟಾಗಿ ಸಾಗುತ್ತಿರುವಾಗ ನಾನು ಗುರು ಸರೋಜಾ ವೈದ್ಯನಾಥ್ ಅವರ ಬಳಿ ನೃತ್ಯ ಕಲಿಯಲು ಸೇರಿದೆ. ದಿನಗಳೆದಂತೆ ನೃತ್ಯದ ಮೇಲಿನ ಪ್ರೀತಿಯು ದಟ್ಟವಾಗುತ್ತಿರುವುದು ಆಗ ನನ್ನ ಅರಿವಿಗೆ ಬಂದಿರಲಿಲ್ಲ. 19ನೇ ವರ್ಷದಲ್ಲಿ ನಾನು ಗುರುಗಳ ಮಗ ಸಿ.ವಿ. ಕಾಮೇಶ್ ಅವರನ್ನು ಮದುವೆಯಾದೆ. ಅಲ್ಲಿಂದ ಕೌಟುಂಬಿಕ ಜೀವನಕ್ಕೆ ಕಾಲಿಟ್ಟರೂ, ನಾನು ಸೇರಿದ್ದು ನೃತ್ಯವನ್ನು ಪೂಜಿಸುವ ಒಂದು ಕುಟುಂಬಕ್ಕೆ. ಇದೆಲ್ಲ ದೈವ ಸಂಕಲ್ಪವಲ್ಲದೆ ಇನ್ನೇನು. ದೇವರು ಯಾವುದೋ ಒಂದು ಕಾರಣಕ್ಕೆ ನನಗೆ ಇಂತಹ ಯೋಗವನ್ನು ದಯಪಾಲಿಸಿದ್ದಾರೆ ಎಂಬ ಭಾವನೆಯು ಮೊಳಕೆಯೊಡೆಯಿತು. ಹೀಗೆ ನೃತ್ಯದ ಸೆಳವಿಗೆ ಸಿಕ್ಕ ನನಗೆ ನನ್ನ ಗುರುಗಳೂ, ಅತ್ತೆಯೂ ಆದ ಸರೋಜಾ ವೈದ್ಯನಾಥನ್ ಮಾರ್ಗದರ್ಶನ